ಶ್ರೀ ಬಿ.ಹೆಚ್. ಬನ್ನಿಕೋಡ್:– ಮುಂದಿನ ತಿಂಗಳು ಮೂರನೆಯ ತಾರೀಖು ನಮ್ಮ ಜಿಲ್ಲೆಯ ಮಂತ್ರಿಗಳಾದ ಗೋಪಿನಾಥ ಸಾಂಡ್ರಾರವರು ಬರುತ್ತಾರೆ. ಅವರ ಜೊತೆಯಲ್ಲಿ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ. ಅವರಿಗೆ ತೃಪ್ತಿಯಾದರೆ ನೀವು ಅಲ್ಲಿ ಬಸ್‌ಸ್ಟ್ಯಾಂಡ್ ಮಾಡಿ.

ಶ್ರೀ ಭೀಮಣ್ಣ ಖಂಡ್ರೆ:– ನಮ್ಮ ಮುಖ್ಯ ಇಂಜಿನಿಯರ್ ಸರಿಯೆಂದರೆ ಮಾಡುತ್ತೇವೆ. ಇಲ್ಲದಿದ್ದರೆ ಬೇರೆ ಸೈಟು ಕೊಡಿ.

ಮುಖ್ಯಮಂತ್ರಿಯವರ ಕಾರ್ಯಕ್ರಮದ ಬಗ್ಗೆ ಖರ್ಚಾಗಿರುವ ಹಣದ ಕುರಿತು.

207. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ವತಿಯಿಂದ ಮುಖ್ಯಮಂತ್ರಿಗಳ ಕಾರ್ಯಕ್ರಮಗಳ ಉದ್ಘಾಟನೆ: ಶಂಕುಸ್ಥಾಪನೆ ಇನ್ನಿತರ ಪ್ರಚಾರ ಕಾರ್ಯಕ್ಕಾಗಿ ಪತ್ರಿಕಾ ಜಾಹೀರಾತಿಗಾಗಿ ಕಳೆದ 9 ತಿಂಗಳಿಂದ ಖರ್ಚು ಮಾಡಿರುವ ಹಣವೆಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಳೆದ 9 ತಿಂಗಳಲ್ಲಿ ಮುಖ್ಯಮಂತ್ರಿಯವರು ನೆರವೇರಿಸಿದ ಬಸ್ ಘಟಕ ಮತ್ತು ಬಸ್ ನಿಲ್ದಾಣಗಳ ಶಂಕುಸ್ಥಾಪನಾ ಸಮಾರಂಭಗಳಿಗೆ ರೂ. 47,348–00 ಹಾಗೂ ಜಾಹೀರಾತಿಗಾಗಿ ರೂ. 71,800–00ಗಳನ್ನು ವೆಚ್ಚ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಉಪಾಧ್ಯಕ್ಷೆಣಿಯವರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಳೆದ 9 ತಿಂಗಳಿನಲ್ಲಿ ಮುಖ್ಯಮಂತ್ರಿಯವರು ನೆರವೇರಿಸಿದ ಬಸ್ ಘಟಕ ಮತ್ತು ಬಸ್‌ನಿಲ್ದಾಣಗಳ ಶಂಕುಸ್ಥಾಪನಾ ಸಮಾರಂಭಗಳಿಗೆ ರೂಪಾಯಿ 47,348 ಹಾಗೂ ಜಾಹೀರಾತಿಗಾಗಿ ರೂಪಾಯಿ 71,800 ವೆಚ್ಚ ಮಾಡಲಾಗಿದೆಯೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಯಮಾವಳಿ ಪ್ರಕಾರ ಈ ರೀತಿ ಮುಖ್ಯಮಂತ್ರಿಗಳು ಬೇರೆ ಬೇರೆ ಕಾರ್ಯಕ್ರಮಗಳಿಗೆ ಹೋದಾಗ ಜಾಹೀರಾತಿಗಾಗಿ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶ ಇದೆಯೆ ? ಹಿಂದಿನ ಸಾರಿಗೆ ಸಚಿವರಾದ ಅಜೀಜ್ ಸೇಠ್‌ರವರು ಕಾನೂನು ಬಾಹಿರವಾಗಿ ನನ್ನ ಗಮನಕ್ಕೆ ತರದೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅದಕ್ಕೆ ನಾನು ಅನುಮತಿಯನ್ನು ಕೊಟ್ಟಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೆ ? ರೂಪಾಯಿ 71,800ನ್ನು ಯಾವ ಕಾರ್ಯಕ್ರಮಕ್ಕಾಗಿ ಖರ್ಚು ಮಾಡಿದ್ದಾರೆನ್ನುವುದನ್ನು ಸ್ಪೆಸಿಫಿಕ್ ಆಗಿ ಹೇಳುತ್ತೀರಾ ?

ಶ್ರೀ ಭೀಮಣ್ಣ ಖಂಡ್ರೆ:– ದಿನಾಂಕ ,2–5–92ರಂದು ಬಿಜಾಪುರ ಡಿವಿಜನ್‌ನಲ್ಲಿ ಮಡವಿ ಬಸ್‌ನಿಲ್ದಾಣ ಶಂಕುಸ್ಥಾಪನೆ ಮಾಡಲಿಕ್ಕೆ ಮುಖ್ಯಮಂತ್ರಿಗಳು ಹೋಗಿದ್ದರು ಅದಕ್ಕಾಗಿ ಖರ್ಚಾಗಿರುವುದು 24,886 ರೂಪಾಯಿ. ಅದೇ ರೀತಿ ಕುಣಿಗಲ್ ಬಸ್‌ಸ್ಟ್ಯಾಂಡ್ ಅಡಿಗಲ್ಲು ಸಮಾರಂಭಕ್ಕೆ ಮುಖ್ಯಮಂತ್ರಿಗಳು ಹೋಗಿದ್ದರು. ಅದು ದಿನಾಂಕ 5–5–92ರಂದು. ಅಲ್ಲಿ ಖರ್ಚಾಗಿರುವುದು 9,547 ರೂಪಾಯಿ. ರಾಯಚೂರು ಡಿವಿಜನ್, ಕನಕಗಿರಿ ಅಲ್ಲಿಗೆ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ 28–5–92ರಂದು ಮುಖ್ಯಮಂತ್ರಿಗಳು ಹೋಗಿದ್ದಾರೆ. ಅದಕ್ಕಾಗಿ ಖರ್ಚಾಗಿರುವುದು 7,085 ರೂಪಾಯಿ. ಬಳ್ಳಾರಿ ಬಸ್ ನಿಲ್ದಾಣಕ್ಕೆ ಅಡಿಗಲ್ಲು ಸಮಾರಂಭಕ್ಕೆ ಮುಖ್ಯಮಂತ್ರಿಗಳು ದಿನಾಂಕ 25–9–92ರಂದು ಹೋಗಿದ್ದಾರೆ. ಅಲ್ಲಿ ಏನೂ ಖರ್ಚಾಗಿಲ್ಲ. ಹೊಸಕೋಟೆ ಬಸ್ ಡಿಪೋ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ 1–10–92ರಂದು ಹೋಗಿದ್ದಾರೆ.

ಅಲ್ಲಿಯೂ ಸಹ ಏನೂ ಖರ್ಚಾಗಿಲ್ಲ. ಜನರೇ ಅಲ್ಲಿ ಖರ್ಚು ಮಾಡಿದ್ದಾರೆ, ಸರ್ಕಾರದ ಖರ್ಚು ಇಲ್ಲ. ತೆವಳಿ ಬಸ್‌ಸ್ಟ್ಯಾಂಡ್ ಶಂಕುಸ್ಥಾಪನೆಗೆ ದಿನಾಂಕ 4–10–92ರಂದು ಮುಖ್ಯಮಂತ್ರಿಗಳು ಹೋಗಿದ್ದಾರೆ. ಅಲ್ಲಿ 6 ಸಾವಿರ ರೂಪಾಯಿ ಖರ್ಚಾಗಿದೆ. ಜಾಹೀರಾತಿಗಾಗಿ 71,800 ರೂಪಾಯಿ, ಕಾರ್ಯಕ್ರಮಗಳಿಗಾಗಿ 47,348 ರೂಪಾಯಿಗಳು ಖರ್ಚಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಜಾಹೀರಾತಿಗಾಗಿ ಅವರೇನು 71,800 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಅದು ಸಾರಿಗೆ ಸಂಸ್ಥೆಯ ಕಾರ್ಯಕ್ರಮಕ್ಕೆ ಏನೂ ಸಂಬಂಧವಿಲ್ಲ. ಸಂಸ್ಥೆಯ ನಿಯಮಾವಳಿಯ ಪ್ರಕಾರ ಮುಖ್ಯಮಂತ್ರಿಗಳು ಶಂಕುಸ್ಥಾಪನೆಗೆ ಹೋದಾಗ ಜಾಹೀರಾತಿಗಾಗಿ ಹಣವನ್ನು ಕೊಡುವುದಕ್ಕೆ ಅವಕಾಶ ಇದೆಯೆ ? ಹಿಂದಿನ ಸಾರಿಗೆ ಸಚಿವರು ಈ ಬಗ್ಗೆ ಸ್ಪಷ್ಟವಾಗಿ ಇದು ಸರಿಯಲ್ಲವೆಂದು ಹೇಳಿದ್ದಾರೆ. 71,800 ರೂಪಾಯಿಗಳನ್ನು ಜಾಹೀರಾತಿಗಾಗಿ ಕೊಟ್ಟಿರುವುದು ಸಾರಿಗೆ ಸಂಸ್ಥೆಯ ಯಾವುದೇ ಕಾರ್ಯಕ್ರಮಕ್ಕೆ ಸಂಬಂಧವಿಲ್ಲ. ಕಾರ್ಯಕ್ರಮಕ್ಕಾಗಿ ಕೊಟ್ಟಿದ್ದೇವೆಂದು ಹೇಳುವುದು ಸತ್ಯಕ್ಕೆ ದೂರವಾದುದು. ಸಾರಿಗೆ ಸಂಸ್ಥೆಯ ಕಾರ್ಯಕ್ರಮಕ್ಕೆ ಸಂಬಂಧವಿಲ್ಲ. ಬೇರೆ ಯಾವುದೋ ಒಂದು ಸಾರ್ವಜನಿಕ ಸಮಾರಂಭಕ್ಕೆ ಮುಖ್ಯಮಂತ್ರಿಗಳು ಹೋದಾಗ ಜಾಹೀರಾತಿಗೆ ಕೊಟ್ಟಿರತಕ್ಕದ್ದು. ಈ ರೀತಿಯಾಗಿ ಕಾನೂನು ಬಾಹಿರವಾಗಿ ಹಣವನ್ನು ಖರ್ಚು ಮಾಡಿರತಕ್ಕ ಹಣವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಾಪಸ್ಸು ವಸೂಲಿ ಮಾಡುತ್ತೀರಾ ? ಈ ಬಗ್ಗೆ ಹಿಂದಿನ ಸಾರಿಗೆ ಸಚಿವರಾದ ಅಜೀಜ್‌ಸೇಠ್‌ರವರು ಆರೋಪ ಮಾಡಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೆ ? ಆ ಫೈಲ್‌ನಲ್ಲಿ ಏನಿದೆ ?

ಶ್ರೀ ಭೀಮಣ್ಣ ಖಂಡ್ರೆ:– ಶ್ರೀ ಅಜೀಜ್ ಸೇಠ್ ಅವರು ಹೇಳಿದ್ದುದು ನಮ್ಮ ಗಮನಕ್ಕೆ ಬಂದಿಲ್ಲ. ಇಲ್ಲಿರುವ ರೆಕಾರ್ಡ್ಸ್ ಪ್ರಕಾರ ಈ ರೀತಿ ತೋರುತ್ತದೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಈ ಪ್ರಕಾರ ಅಡ್ವರ್ಟೈಸ್‌ಮೆಂಟ್ ಕೊಡಲಿಕ್ಕೆ ಅವಕಾಶ ಇದೆ. ಆ ಪ್ರಕಾರ ಅವರು ಕೊಟ್ಟಿದ್ದಾರೆ ಎಂದು ದಾಖಲೆ ಹೇಳುತ್ತಾ ಇದೆ. ನಿಮ್ಮ ಪ್ರಕಾರ ಇಲ್ಲವೆಂದರೆ ನಾನು ಮತ್ತೊಮ್ಮೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈ ಕೆ.ಎಸ್.ಆರ್.ಟಿ.ಸಿ. ಲಾಸ್‌ನಲ್ಲಿ ನಡೆಯುತ್ತಾ ಇರಬೇಕಾದರೆ ಈ ರೀತಿ 9 ತಿಂಗಳಲ್ಲಿ 1,19,148 ರೂಪಾಯಿ ಖರ್ಚು ಮಾಡಿದ್ದಾರೆ ಎಂದು ಹೇಳುವುದಾದರೆ, ಕೆ.ಎಸ್.ಆರ್.ಟಿ.ಸಿ. ಉಳಿಯುವುದಕ್ಕೆ ಸಾಧ್ಯ ಇದೆಯೇ ? ಇದರ ಅಗತ್ಯ ಇತ್ತೇ ? ಈ ರೀತಿ ಮುಂದೆ ಖರ್ಚಾಗುವುದಕ್ಕೆ ತಡೆ ಏನಾದರೂ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ? ನಾನು ನಿರ್ದಿಷ್ಟವಾಗಿ 9 ತಿಂಗಳದ್ದು ಮಾತ್ರ ಕೇಳಿದ್ದೇನೆ. ಉಳಿದದ್ದು ಅನೇಕ ಕೋಟಿಗಟ್ಟಲೆ ಇದೆ. ಅದರ ಬಗ್ಗೆ ನಾನು ಕೇಳಿಲ್ಲ. ಇದರ ಬಗ್ಗೆ ನಿಮ್ಮ ಮುಂದಿನ ಕ್ರಮ ಏನು ?

ಶ್ರೀ ಭೀಮಣ್ಣ ಖಂಡ್ರೆ:– ಈ ರಾಜ್ಯದ ಮುಖ್ಯಮಂತ್ರಿಯಾಗಿ ಎಂಟು–ಹತ್ತು ಸ್ಥಳಗಳಿಗೆ ಕೆಲಸ ಮಾಡುವುದಕ್ಕೆ ಹೋದಾಗ ಖರ್ಚು ಆಗುವುದು ಸ್ವಾಭಾವಿಕ. ಅದೂ ಅಲ್ಲದೇ ಈ ಅಡ್ವರ್ಟೈಸ್‌ಮೆಂಟ್ ಬಗ್ಗೆ ಏನು ಖರ್ಚು ಮಾಡಿದರೂ ಅದು ಕೆ.ಎಸ್.ಆರ್.ಟಿ.ಸಿ. ರೂಲ್ಸ್ ಪ್ರಕಾರ ಅವಕಾಶ ಇದೆ. According to that it was spent.

ಶ್ರೀ ಬಿ.ಎಸ್. ಯಡಿಯೂರಪ್ಪ:– ಜಾಹೀರಾತಿಗೆ ಕೊಟ್ಟಿರುವ ಹಣ ಕೆ.ಎಸ್.ಆರ್.ಟಿ.ಸಿ.ಗೆ ಸಂಬಂಧ ಇಲ್ಲದ ಹಾಗೆ ಕೊಟ್ಟಿದ್ದಾರೆ. ಅದು ನಿಜ ಇದ್ದರೆ, ಈ ಹಣವನ್ನು ವಸೂಲು ಮಾಡುತ್ತೀರಾ ? ನನಗೆ ನೇರವಾಗಿ ಉತ್ತರ ಬೇಕು, ಅಷ್ಟೆ.

ಶ್ರೀ ಭೀಮಣ್ಣ ಖಂಡ್ರೆ:– ವಸೂಲು ಮಾಡುವ ಪ್ರಸಂಗ ಬರುವುದಿಲ್ಲ. ಏಕೆಂದರೆ ಮುಖ್ಯಮಂತ್ರಿಗಳು ಅಥವಾ ಬೇರೆಯವರ ಕಡೆಯಿಂದ ಯಾರ ಕಡೆಯಿಂದಲೂ ವಾಪಸ್ಸು

ತೆಗೆದುಕೊಳ್ಳುವ ಪ್ರಸಂಗ ಬರುವುದಿಲ್ಲ. ಆದರೆ as a guidance for future we will avoid such expenditure.

ಉಪಾಧ್ಯಕ್ಷರು:– ಶ್ರೀ ಸಿಂಧ್ಯಾರವರೇ, ನಿಮ್ಮ ಪ್ರಶ್ನೆ 56 (318)ಗೆ ಒಂದು ವಾರ ಟೈಮ್ ಕೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ತಾವು ದಯವಿಟ್ಟು ಕೇಳಬೇಕು. ಈ ಸದನವನ್ನು ಮೊದಲು 16ನೇ ತಾರೀಖಿಗೆ ಕರೆದರು. ನಂತರ 28ನೇ ತಾರೀಖಿಗೆ ಪೋಸ್ಟ್‌ಪೋನ್ ಮಾಡಿದರು. ನಾವು ಒಂದು ಪ್ರಶ್ನೆಯನ್ನು ಸರ್ಕಾರಕ್ಕೆ ಕಳಿಸಬೇಕಾದರೆ 20 ದಿನ ಟೈಮ್ ಬೇಕು. ಸರ್ಕಾರಿ ಅಧಿಕಾರಿಗಳಿಗೆಲ್ಲ ಬಹಳ ಕಷ್ಟ, ಸುದ್ದಿಗಳನ್ನು ತಂದುಕೊಡುವುದಕ್ಕೆ ಮಂತ್ರಿಗಳಿಗೆ ಸ್ಟಾಫ್ ಇಲ್ಲ ಎಂದು ಹೇಳಿ ಹತ್ತು ದಿವಸ ಟೈಮ್ ತೆಗೆದುಕೊಂಡು ಮಾಡಿದರು. ನಾನು ಇದನ್ನು ಮುಂಚೆಯೇ ಕಳಿಸಿದ್ದೇನೆ. ಈಗಾಗಲೇ ಹತ್ತು ದಿನ ಆಗಿದೆ. ನಾನು ಕೇಳಿರುವ ಪ್ರಶ್ನೆಯಾದರೂ ಏನು ? It is a very simple question ಸೆಂಟ್ರಲ್ ಆಫೀಸ್‌ನಲ್ಲೇ ಸುದ್ದಿ ಇರುತ್ತದೆ. ಇದನ್ನು ಸ್ಟ್ಯಾಟಿಸ್ಟಿಕಲ್ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನಲ್ಲಿ ಕೇಳಿದರೆ ಐದು ನಿಮಿಷದಲ್ಲಿ ಹೇಳಬಹುದು. ನಿಮಗೆ ಉತ್ತರ ಕೊಡುವುದಕ್ಕೆ ಎಂಟು ದಿನ ಏಕೆ ಬೇಕು ? ಇನ್ನು ಎಂಟು ದಿವಸಕ್ಕೆ ಸೆಶನ್ ನಡೆಯುತ್ತದೆಯೇ ? ನೀವು ಅಧಿಕಾರಿಗಳು ಹೇಳುವುದನ್ನು ಕೇಳಿದರೆ ಆಗುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:– ಅಧಿವೇಶನ ಎಂಟು ದಿವಸ ನಡೆಯುತ್ತದೆ. ಇದು ಮುಂದೆ ಬರುತ್ತದೆ.

SRI P.G.R. SCINDIA:– Hon. Minister must alert your department. There is a secretariat in Vidhana Soudha. There is a seniormost IAS officer deputed as Vice–Chairman and Managing Director to that department. It is a parallel government. It is a very simple question. ನಾನು ಒಬ್ಬ ಜವಾಬ್ದಾರಿಯುತ ಸದಸ್ಯನಾಗಿ ಪ್ರಶ್ನೆ ಕೇಳಿದ್ದಕ್ಕೆ ಎಂಟು ದಿನ ಟೈಮ್ ಕೇಳಿದ್ದೀರಿ. ಇದರಲ್ಲಿ ಕಷ್ಟಕರವಾಗಿರತಕ್ಕಂಥಾದ್ದು ಏನು ? ಎಲ್ಲಾ ಊರುಗಳಿಂದ ಸುದ್ದಿಗಳನ್ನು ತರಿಸಿಕೊಳ್ಳಬೇಕು ಎಂದರೆ ಪರವಾಗಿಲ್ಲ. ಆದರೆ ಇದು ಬಹಳ ಸಾಮಾನ್ಯವಾದ ಪ್ರಶ್ನೆ. 1991–92ರಲ್ಲಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಆಗಿರತಕ್ಕಂಥ ನಷ್ಟ ಎಷ್ಟು ಎಂದು ಹೇಳುವುದಕ್ಕೆ ನಿಮ್ಮ ದಕ್ಷ ಸರ್ಕಾರಕ್ಕೆ ಎಂಟು ದಿವಸ ಬೇಕೇ ? ಎಂಟು ದಿವಸದವರೆಗೆ ಅಧಿವೇಶನ ಇರುತ್ತದೆಯೇ ?

ಶ್ರೀ ಕೆ.ಎಸ್. ಈಶ್ವರಪ್ಪ:– ಇದರಲ್ಲಿ ಪಾಲಿಸಿ ಮ್ಯಾಟರ್ ಇಲ್ಲ.

ಶ್ರೀ ಶಿವಾನಂದ ಎಚ್. ಕೌಜಲಗಿ:– ಇದು ದಕ್ಷ ಸರ್ಕಾರ, ಮೌಲ್ಯಾಧಾರಿತ ಸರ್ಕಾರ ಎಂದು ತಾವು ಹೇಳಿ ಬಂದಿರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಈಗ ಶ್ರೀ ಭೀಮಣ್ಣ ಖಂಡ್ರೆಯವರ ಉದ್ದೇಶವನ್ನು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಅವರ ಸಿನ್ಸಿಯಾರಿಟಿಯನ್ನು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಅವರು ಹೊಸದಾಗಿ ಮಂತ್ರಿಯಾಗಿ ಬಂದಿದ್ದಾರೆ, ಹಿರಿಯರು ಇದ್ದಾರೆ. ನನಗೆ ಅವರಿಂದ ಒಂದು ಭರವಸೆ ಬೇಕು. ಈ ಸೆಶನ್ ಮುಳುಗುವುದರೊಳಗೆ ..... ಮುಳುಗೋಯ್ತು ಅಂತಿದ್ದೀನಿ .....

(ನಗು)

ಉಪಾಧ್ಯಕ್ಷರು:– ಏಕೆ ಮುಳುಗಿಸ್ತೀರಿ ?